ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ : *18.07.2024.*

ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಪ್ರಾಸಾ.*1* ರವರನ್ನು ಪುನಃ ಕರೆಸಿ *3* ನೇ ಪ್ರತಿವಾದಿ ಪರ ವಕೀಲರಿಗೆ ಪಾಟೀ ಸವಾಲು ಮಾಡಲು ಅನುಮತಿಸಲಾಗಿರುತ್ತದೆ.

ಪಾಟೀ ಸವಾಲು : *3* ನೇ ಪ್ರತಿವಾದಿ ಪರ ಡಿಟಿವಿ ರವರಿಂದ ಪಾಟೀ ಸವಾಲು

*1* ನೇ ಪ್ರತಿವಾದಿ ಕುಟುಂಬದ ಯಜಮಾನ ಎಂದರೆ ಸರಿ. ನಮ್ಮ ಕುಟುಂಬಕ್ಕಿದ್ದ ಆಸ್ತಿಗಳು ಯಾವು ಯಾವು ಎಂದು ನನಗೆ ಗೊತ್ತಿದೆ. ಅವುಗಳ ಸರ್ವೆ ನಂ. *101/04,* ನಂತರ ಸಾಕ್ಷಿ ಕೆಲವು ಸರ್ವೆ ನಂಬರ್ ಗಳು ಗೊತ್ತಿದೆ, ಕೆಲವು ಸರ್ವೆ ನಂಬರ್ ಗಳು ಗೊತ್ತಿಲ್ಲ ಎಂದು ಹೇಳುತ್ತಾರೆ. ಸರ್ವೆ ನಂಬರ್ ಗಳ ಆಸ್ತಿ *1* ನೇ ಪ್ರತಿವಾದಿ ಹೆಸರಿನಲ್ಲಿವೆ. ದಾವಾ ಷೆಡ್ಯೂಲ್ ಐಟಂ ನಂ.*1* *2* ಪ್ರತಿವಾದಿ ಹೆಸರಿನಲ್ಲಿ ಇತ್ತು ಎಂಬುದನ್ನು ತಿಳಿದುಕೊಂಡಿದ್ದೇನೆ. ದಾವಾ ಷೆಡ್ಯೂಲ್ ಐಟಂ ನಂ.*1* *2* ನೇ ಪ್ರತಿವಾದಿ ಹೆಸರಿಗೆ *1* ನೇ ಪ್ರತಿವಾದಿ ಮಾರಾಟ ಮಾಡಿರುವ ಮುಖಾಂತರ ಬಂದಿದೆ ಎಂದರೆ ಸರಿ. *3* ನೇ ಪ್ರತಿವಾದಿ *2* ನೇ ಪ್ರತಿವಾದಿಯಿಂದ ದಾವಾ ಷೆಡ್ಯೂಲ್ ಐಟಂ ನಂ *1* ಖರೀದಿಸಿದ್ದಾರೆ ಎಂದರೆ ಸರಿ. *1* ನೇ ಪ್ರತಿವಾದಿ *2* ನೇ ಪ್ರತಿವಾದಿಗೆ ದಾವಾ ಷೆಡ್ಯೂಲ್ ಐಟಂ ನಂ.*1* ನ್ನು ಮಾರಾಟ ಮಾಡಿದಾಗ ನೀವುಗಳೆಲ್ಲಾ ಅಪ್ರಾಪ್ತ ವಯಸ್ಕರು ಎಂದರೆ ಸರಿ. *1* ನೇ ಪ್ರತಿವಾದಿ ಲಾರಿ ಇಟ್ಟುಕೊಂಡಿದ್ದರೆ ಎಂದರೆ ಸಾಕ್ಷಿ ಬೇರೆಯವರ ಲಾರಿ ಎಂದು ಹೇಳುತ್ತಾರೆ. *1* ನೇ ಪ್ರತಿವಾದಿ ಆಸ್ತಿಯನ್ನು *2* ನೇ ಪ್ರತಿವಾದಿಗೆ ಯಾವ ಕಾರಣಕ್ಕಾಗಿ ಮಾರಾಟ ಮಾಡಿದರು ಎಂದು ಕಾರಣ ತಿಳಿದುಕೊಂಡಿದ್ದೀರ ಎಂದರೆ ಸಾಕ್ಷಿ, ಮಾರಾಟ ಮಾಡಿದ ನಂತರ ನನಗೆ ಗೊತ್ತಾಯಿತು ಎಂದು ಹೇಳುತ್ತಾರೆ. *1* ನೇ ಪ್ರತಿವಾದಿಗೆ ದಾವಾ ಐಟಂ *1* ಸ್ವತ್ತು ನನ್ನ ತಾತನ ಮುಖಾಂತರ ಬಂದಿದೆ. ನೀವುಗಳು *1* ನೇ ಪ್ರತಿವಾದಿಯ ಜೊತೆ ವಾಸವಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ *1* ನೇ ಪ್ರತಿವಾದಿ ಮನೆಗೆ ಆಗಾಗ ಬರುತ್ತಾರೆ ಎಂದು ಹೇಳುತ್ತಾರೆ. ನಾನು ಪ್ರಸ್ತುತ ಪಿ.ಜಿ. ಯಲ್ಲಿ

ವಾಸವಿದ್ದೇನೆ. ಖಾತೆ ಬದಲಾವಣೆಯಾಗಿರುವ ಬಗ್ಗೆ ನಾವುಗಳು ಇಲ್ಲಿಯವರೆಗೂ ಕಂದಾಯಾಧಿಕಾರಿಗಳ ಮುಂದೆ ಪ್ರಶ್ನೆ ಮಾಡಿಲ್ಲ. ನಮ್ಮ ತಾಯಿಗೆ ಮತ್ತು ನಮಗೆ *1*ನೇ ಪ್ರತಿವಾದಿ ತೊಂದರೆ ಕೊಡುತ್ತಿದ್ದ ಬಗ್ಗೆ ನಾವು ಪೊಲೀಸರಿಗೆ ದೂರು ಕೊಟ್ಟಿಲ್ಲ. *1*ನೇ ಪ್ರತಿವಾದಿ ದಾವಾ ಷೆಡ್ಯೂಲ್ ಐಟಂ ನಂ.*1* ರ ಆಸ್ತಿಯನ್ನು ತನ್ನ ಕಾನೂನಿನ ಅವಶ್ಯಕತೆಗಾಗಿ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಆ ಆಸ್ತಿಯನ್ನು ಲಪಟಾಯಿಸಲು ನೀವುಗಳು ಹಾಗೂ *1*ನೇ ಪ್ರತಿವಾದಿ ಪರಸ್ಪರ ಶಾಮೀಲಾಗಿ ದಾವೆ ಸಲ್ಲಿಸಿರುತ್ತೀರ ಎಂದರೆ ಸರಿಯಲ್ಲ. *3*ನೇ ಪ್ರತಿವಾದಿ ದಾವಾ ಷೆಡ್ಯೂಲ್ ಐಟಂ ನಂ.*1* ರ ಸ್ವತ್ತಿನ ಸ್ವಾದೀನ ಕ್ರಯಕ್ಕೆ ಕೊಂಡಾಗಿನಿಂದಲು ಇದ್ದಾರೆ ಎಂದರೆ ಸರಿಯಲ್ಲ. ನೀವು ಐಟಂ ನಂ.*1* ಸ್ವತ್ತಿನ ಸ್ವಾದೀನ ಹೊಂದಿರುವ ಬಗ್ಗೆ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನೀವು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರ ಎಂದರೆ ಸರಿಯಲ್ಲ. *3*ನೇ ಪ್ರತಿವಾದಿ ಹೆಸರಿನಲ್ಲಿರುವ ಸ್ವತ್ತಿನ ಮೇಲೆ ನಿಮಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. *1*ನೇ ಪ್ರತಿವಾದಿ *1* ರಿಂದ *4* ನೇ ವಾದಿ ಮತ್ತು ನಿಮ್ಮ ತಾಯಿರವರ ಅಬಿವೃದ್ಧಿಗಾರಿ ದಾವಾ ಐಟಂ *1* ರ ಸ್ವತ್ತನ್ನು *2*ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಷಯವನ್ನು ಮುಚ್ಚಿಟ್ಟು ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗೊಳಿಸಲಾಯಿತು.
ಓ ಹೇ ಕೇ ಸ ಇ ಒ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ಪಾಂಡವಪುರ.